# Books and Books Chapters in Edited Books (2020-21)

# ಕನ್ನಡದ ನಾಳೆಗಳು

ಸಂಪಾದಕರು
ಡಾ. ರೇಣುಕಪ್ರಸಾದ್ ಬಿ.ಆರ್
ಡಾ. ನಳಿನ ಎನ್
ಡಾ. ಗೋವಿಂದರಾಯ ಎಂ

ಜನಸ್ಪಂದನ
Janaspandana

Scanned with CamScanner

# ಕನ್ನಡದ ನಾಳೆಗಳು

ಸಂಪಾದಕರು
ಡಾ. ರೇಣುಕಪ್ರಸಾದ್ ಬಿ.ಆರ್.
ಡಾ. ನಳಿನ ಎನ್
ಡಾ. ಗೋವಿಂದರಾಯ ಎಂ.

Published by
**Janaspandana Trust (Reg)**
Near Market, S.S Road, Shikaripura-577427
Shimoga District, Karnataka
Mob:9620083614, 08187-222344
Email : jstskp1@gmail.com

First Impression : 2020

Pages : 532

Paper Used : 70 gsm NS

Book Size : 1/8th Demy

© : Author

Price : 500/-

**ISBN : 978-81-939783-3-7**

DTP : Swetha

Cover Page : Arun Kumar G

Printed at :
Ammaji Printers
Bangalore

* * *

This book is protected by copyright laws. No part of this book is to be reproduced, transmitted, utilized or stored in any form or by any means now known or hereinafter invented, electronic, digital or mechanical, including photocopying, scanning, recording or by any information storage or retrieval system, without prior written permission from the author or publisher.



Scanned with CamScanner

## 48

# ನವ್ಯ ಕಾದಂಬರಿಗಳಲ್ಲಿ ಗ್ರಾಮ ಚಿತ್ರಣ

ರೇಣುಕಾ. ಡಿ.
ಸಂಶೋಧನಾ ವಿಧ್ಯಾರ್ಥಿ,
ಪಲ್ಲಾಗಟ್ಟಿ ಅಡವಪ್ಪ ಕಾಲೇಜು, ತಿಪಟೂರು.
ಮಾರ್ಗದರ್ಶನ
ಡಾ. ಶಿವಣ್ಣ, ಎಸ್.,
ಸಹಾಯಕ ಪ್ರಾಧ್ಯಾಪಕರು,
ತುಮಕೂರು ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು.

ನವ್ಯ ಕಾದಂಬರಿಗಳು ಸಾಮಾನ್ಯವಾಗಿ ಸ್ವಾತಂತ್ರ್ಯ ನಂತರದ ಗ್ರಾಮಗಳ ಚಿತ್ರಣವನ್ನು ಒಳಗೊಂಡಿರುತ್ತದೆ. ನವ್ಯತೆಯನ್ನು ಒಳಗೊಂಡಂತೆಯೇ ಗ್ರಾಮ್ಯದ ಚಿತ್ರಣವನ್ನು ನೀಡುತ್ತವೆ. ಪ್ರತಿಮೆ, ರೂಪಕ, ಅಂತರ್‌ಮುಖತೆಯನ್ನು ಒಳಗೊಂಡ ಪಾತ್ರಗಳು ನವ್ಯದ ಪ್ರತಿನಿಧಿಗಳಾಗುತ್ತವೆ. ಶ್ರೀಕೃಷ್ಣ ಆಲನಹಳ್ಳಿ ಅವರ "ಕಾಡು" ಕಾದಂಬರಿಯಲ್ಲಿ ಪುಟ್ಟ ಕಿಟ್ಟಿಯ ಮೂಲಕ ಅವನ ಸುತ್ತಲಿನ ಸಮಾಜವು ಕಣ್ಣಿಗೆ ಕಟ್ಟುವಂತೆ ಚಿತ್ರಣಗೊಂಡಿದೆ. ಹಳ್ಳಿಗಳಲ್ಲಿ ಇರುವ ಮಕ್ಕಳ ಬಾಲ್ಯದ ಪ್ರತಿನಿಧಿಯಾಗಿ ಕಿಟ್ಟಿ ಕಂಡುಬರುತ್ತಾನೆ.

ಇಲ್ಲಿ ಕಿಟ್ಟಿಯ ಮೂಲಕ ಮುಗ್ಧ ಹುಡುಗನೊಬ್ಬನ ಪ್ರಪಂಚ ಮತ್ತು ಅವನ ದೃಷ್ಟಿಯಲ್ಲಿ ದೊಡ್ಡವರ ರಾಕ್ಷಸಲೋಕದ ಅನಾವರಣವಾಗುತ್ತದೆ. ಆ ರಾಕ್ಷಸ ಲೋಕದಲ್ಲಿಯೇ ಕಮಲಮ್ಮನಂತಹ ಮಾತೃ ಹೃದಯಿ ಅನುಭವಿಸುವ ಯಾತನೆಯನ್ನು ಕಾಣಬಹುದು. ಅನ್ಯೆತಿಕ ಸಂಬಂಧಗಳು ಮತ್ತು ಅಂತಹ ಸಂಬಂಧಗಳಲ್ಲಿಯೂ ಅನ್ಯೋನ್ಯತೆಯ ಚಿತ್ರಣವನ್ನು ಚಿತ್ರಿಸಲಾಗಿದೆ. ಈ ಮೂಲಕ ಗ್ರಾಮೀಣ ಸಮಾಜದಲ್ಲಿ ಅನ್ಯೆತಿಕಯನ್ನು ನೈತಿಕಕತೆಯನ್ನು ಸ್ವೀಕರಿಸುವ ಮನಃಸ್ಥಿತಿಗಳು ಕಂಡುಬರುತ್ತದೆ. ಕಿಟ್ಟಿಯ ಮನೆಯ ಹಸುವಿನ ಚಿತ್ರಣ ಒಂದು ಪ್ರತಿಮೆಯಂತೆ

ಕಂಡರು ಅಲ್ಲಿ ಮೂಕ ಪ್ರಾಣಿಗಳನ್ನು ಹಾರೈಕೆ ಮಾಡುವ ಮಾನವೀಯತೆಯನ್ನು ಕಾದಂಬರಿ ಚಿತ್ರಿಸುತ್ತದೆ. ಹಳ್ಳಿಗಳಲ್ಲಿ ಮೂಕ ಪ್ರಾಣಿಗಳು ಸಹ ಕುಟುಂಬದ ಅವಿಭಾಜ್ಯ ಅಂಗಗಳಾಗಿರುವುದು ; ಅವುಗಳ ಸಾವು-ಅನಾರೋಗ್ಯ ಕುಟುಂಬ ಸದಸ್ಯರನ್ನು ದುಃಖಕ್ಕೆ ಈಡುಮಾಡುತ್ತವೆ.

ಹೊಸೂರು ಗ್ರಾಮದ ಹಬ್ಬದಲ್ಲಿ ಕ್ರೌರ್ಯವಿದ್ದರೂ ಗ್ರಾಮ್ಯಗಳಲ್ಲಿ ಹಬ್ಬ-ಹರಿದಿನಗಳ ಆಚರಣೆಗಳನ್ನು ವಿವರವಾಗಿ ಚಿತ್ರಿಸಲಾಗಿದೆ. ಈ ಮೂಲಕ ಗ್ರಾಮ ಸಮೂಜಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಅವಕಾಶವಾಗುತ್ತದೆ. ಚಂದ್ರೇಗೌಡ ಮತ್ತು ಶಿವಗಂಗ ಇವರ ನಡುವಿನ ದ್ವೇಷ ಕ್ರೌರ್ಯವನ್ನು ಮತ್ತು ಕಮಲಮ್ಮಳ ಮೇಲೆ ನಡೆಯುವ ಅತ್ಯಾಚಾರ ಮನುಷ್ಯನಲ್ಲಿ ಇರುವ ಮೃಗೀಯತೆಯ ಪ್ರತೀಕವಾಗಿದೆ ಇದೆಲ್ಲವನ್ನು ಕಿಟ್ಟಿಯ ಮೂಲಕವೇ ಚಿತ್ರಿಸುವುದರಿಂದ ಆ ಮುಗ್ಧ ಮನಸ್ಸಿಗೆ ತನ್ನ ಗ್ರಾಮ ಮತ್ತು ತನ್ನ ತಂದೆ-ತಾಯಿ ಎಂದೂ ನೆನಪಾಗದವರು ಈಗ ಅವರ ಬರುವನ್ನೇ ನಿರೀಕ್ಷಿಸುವಂತೆ ಮಾಡುತ್ತದೆ.

'ಕಾಡು' ಎಂಬ ಶೀರ್ಷಿಕೆ ಕಾಡುಗಳ ನಡುವಿರುವ ಗ್ರಾಮದಲ್ಲಿ ಇನ್ನೂ ಕಾಡಿನ ಅಮಾನವೀಯ ಮೃಗೀಯ ಪ್ರವೃತ್ತಿ ಇರುವುದನ್ನು ಚಿತ್ರಿಸುತ್ತದೆ. ಮನುಷ್ಯ ಎಷ್ಟೇ ನಾಗರಿಕತೆಯೆಡೆಗೆ ನಡೆದರು ಅವನ ಮೂಲ ಪ್ರವೃತ್ತಿಯಾದ ಮೃಗೀಯತೆ ಸುಪ್ತವಾಗಿರುವುದು ಇಲ್ಲಿ ಬಹಿರಂಗಗೊಂಡಿದೆ.

ಕಥನ ಕಿಟ್ಟಿಯೊಡನೆಯೇ ಸಾಗುವುದರಿಂದ ಗ್ರಾಮೀಣ ಸಮಾಜದಲ್ಲಿ ಮಕ್ಕಳ ಬಾಲ್ಯದ ಆಟ-ಶಾಲೆಗೆ ಹೋಗುವಾಗ ಅವರು ಎದುರಿಸುತ್ತಿದ್ದ ಸಮಸ್ಯೆಗಳು ಚಿತ್ರಿಸಲಾಗಿದೆ. ಕಿಟ್ಟಿಯಷ್ಟೇ ಹಳ್ಳಿಯು ಕಾದಂಬರಿಯ ಕೇಂದ್ರ ಪಾತ್ರವಾಗುತ್ತದೆ. ಅವನ ದೃಷ್ಟಿಯಲ್ಲಿಯೇ ಕಾದಂಬರಿ ನಿರೂಪಣೆಗೊಳ್ಳುವುದರಿಂದ ದೊಡ್ಡವರ ಪ್ರಪಂಚದ ಕೆಲವು ಅನೈತಿಕತೆಗಳು ಮತ್ತು ಸಣ್ಣತನಗಳು ಅವನಲ್ಲಿ ಯಕ್ಷ ಪ್ರಶ್ನೆಗಳಾಗಿ ಉಳಿಯುತ್ತವೆ. ಅವನನ್ನು ಎದುರುಗೊಳ್ಳುವ ಒಂದೊಂದು ಪ್ರಶ್ನೆಗಳಾಗಿ ಉಳಿಯುತ್ತವೆ. ಅವನನ್ನು ಕಾಡುವ ಒಂದೊಂದು ಪ್ರಶ್ನೆಗಳು ಗ್ರಾಮದ ನೈಜ ಸನ್ನಿವೇಶ ಮತ್ತು ಅವನನ್ನು ಕಾಡುವ ಒಂದೊಂದು ಪ್ರಶ್ನೆಗಳು ಗ್ರಾಮದ ನೈಜ ಚಿತ್ರಣವನ್ನು ಓದುಗರಿಗೆ ನೀಡುತ್ತವೆ.

ದ್ವೇಷಾಸೂಯೆಗಳ ಜ್ವಾಲೆಯ ಪ್ರತೀಕದಂತೆ ಬಣವೆಗೆ ಬೆಂಕಿ ಇಡುತ್ತಾರೆ. ಇಲ್ಲಿ ಗ್ರಾಮಗಳಲ್ಲಿನ ದ್ವೇಷ ಚಿತ್ರಣವಿದೆ. ಗೌರಿ ಕಡಸುವಿನ ಸಾವಿನಿಂದ ಕಮಲಮ್ಮನಿಗೆ (ಅತ್ತೆಗೆ) ನೋವಾದರೆ ಲೋಂಪಿ ಸಂಜೆಗೆ ಬಾಡು ಸಿಗುತ್ತದೆ ಎಂದು ಸಂಭ್ರಮಿಸುವುದು ಹಳ್ಳಿಗಳಲ್ಲಿ ದಲಿತವರ್ಗದ ಜೀವನದ ಸ್ಥಿತಿಗತಿ ಆಹಾರ ಪದ್ಧತಿಯ ಚಿತ್ರಣವನ್ನು ನೀಡುತ್ತದೆ.



Scanned with CamScanner

ಆ ಗ್ರಾಮದಲ್ಲಿ ನಡೆಯುವ ಹಿಂಸಾಚಾರಗಳು ಕಮಲಮ್ಮನ (ಕಿಟ್ಟಿಯ ಅತ್ತೆಯ) ಮೇಲೆ ನಡೆಯುವ ಅತ್ಯಾಚಾರ ಇವೆಲ್ಲವು ಕಿಟ್ಟಿ ಕೇಳುತ್ತಿದ್ದ ಕತೆಗಳಲ್ಲಿನ ರಕ್ಷಸರನ್ನು ನೆನಪಿಸುತ್ತವೆ. ಅಲ್ಲಿನ ಸಾವು-ನೋವು, ಪಾಪ, ಕಾಮ, ದ್ವೇಷಾದಿಗಳು ಒಂದಕ್ಕೊಂದು ಅಂತರ್‌ಸಂಬಂಧ ಹೊಂದಿದ್ದರೂ ಇದ್ಯಾವುದರ ಅರಿವು ಕಿಟ್ಟಿಗಿರುವುದಿಲ್ಲ. ಅದೆಲ್ಲವು ಓದಿಗರ ಅರಿವಿಗೆ ಬಿಡುತ್ತಾರೆ. ಈ ಮೂಲಕ ಗ್ರಾಮೀಣಸಮಾಜ ಒಂದರ ಪತನದ ಚಿತ್ರಣ 'ಕಾಡು' ಕಾದಂಬರಿಯಲ್ಲಿ ಮೂಡಿಬಂದಿದೆ. ಆಲನಹಳ್ಳಿ ಅವರ ಭುಜಂಗಯ್ಯನ ದಶಾವತಾರವು ಗ್ರಾಮ ಜೀವನದ ಚಿತ್ರಣವನ್ನು ನೀಡಿದರೆ ಪರಸಂಗದ ಗೆಂಡೆತಿಮ್ಮ ಗ್ರಾಮೀಣ ಸಮಾಜ ಒಂದರ ಮೇಲೆ ನಗರ ಸಮಾಜದ ಪ್ರಭಾವವನ್ನು ಚಿತ್ರಿಸುತ್ತದೆ. ಮುಗ್ಧತೆ ಮತ್ತು ಮೋಸಗಳ ಮುಖಾಮುಖಿಯನ್ನು ಕಾದಂಬರಿ ಒಳಗೊಂಡಿದೆ.

ಯಶವಂತ ಚಿತ್ತಾಲರ 'ಮೂರು ದಾರಿಗಳು' ಕಾದಂಬರಿಯಲ್ಲಿ ಲೇಖಕರ ಹೇಳುವಂತೆ ಜೀವನವನ್ನು ನೋಡುವ ಮೂರು ದೃಷ್ಟಿಕೋನಗಳಾದ 'ಭೀತಿ, ಪ್ರೀತಿ, ಬಂಡಾಯ'ಗಳನ್ನು ಒಳಗೊಂಡ ವ್ಯಕ್ತಿತ್ವಗಳನ್ನು ಪ್ರಾತಿನಿಧಿಕವಾಗಿ ವಿಶ್ವನಾಥ, ವಾಸುದೇವ, ನಿರ್ಮಲೆಯರನ್ನು ಕೇಂದ್ರವಾಗಿಸಿಕೊಂಡ ಕಾದಂಬರಿ ಹಾಗೂ ಕಾದಂಬರಿಯ ಕೇಂದ್ರ ಭಿನ್ನ ವ್ಯಕ್ತಿತ್ವಗಳು, ದೃಷ್ಟಿಕೋನಗಳಾದರೂ ಇಲ್ಲಿನ ನಾಯಕ ಮತ್ತು ಖಳನಾಯಕನಂತೆ 'ಸಮಾಜ' ಬರುತ್ತದೆ.

ಜೀವನದ ವಿಭಿನ್ನ ದೃಷ್ಟಿಕೋನಗಳ ಮೇಲೆ ಸಮಾಜ ಬೀರುವ ಪ್ರಭಾವವೂ ಇಲ್ಲಿ ಮುಖ್ಯವಾಗುತ್ತದೆ. ಭೀತಿ, ಪ್ರೀತಿ, ಬಂಡಾಯಗಳ ಮೇಲೆ ಸಮಾಜದ ಪ್ರಭಾವವಿದೆ. ವಿಶ್ವನಾಥ ಶಾನುಭಾಗ ಆ ಸಮಾಜದ ಭೀತಿಗೆ ಒಳಪಟ್ಟರೆ, ವಾಸುದೇವ ಸಮಾಜದ ವಿರುದ್ಧ ಪ್ರೀತಿ ಅಥವಾ ಅನುಕಂಪದ ಸ್ವರೂಪದ ವಿರೋಧ ವ್ಯಕ್ತಪಡಿಸುತ್ತಾನೆ. ವಾಸುದೇವನದು ಸಾತ್ವಿಕ ಅಥವಾ ಪ್ರಬುದ್ಧ ಬಂಡಾಯವಾದರೆ ನಿರ್ಮಲೆ ಅದೇ ಸಮಾಜದ ವಿರುದ್ಧ ಆಕ್ರೋಶ ಮತ್ತು ಆವೇಶದ ಬಂಡಾಯವನ್ನು ಸಾರುತ್ತಾಳೆ.

ಒಟ್ಟಾರೆ ಮೂರು ವಿಭಿನ್ನ ದಾರಿಗಳಲ್ಲಿ ಮೂರು ಮನಸ್ಥಿತಿಗಳು, ವ್ಯಕ್ತಿತ್ವಗಳು ಸಮಾಜದೊಂದಿಗೆ ಮುಖಾಮುಖಿಯಾಗುವುದೇ ಮೂರುದಾರಿಗಳು. ಅಂದರೆ ಇಲ್ಲಿನ ಆ ಸಮಾಜ ಯಶವಂತ ಚಿತ್ತಾಲರ ಕತೆಗಳಲ್ಲಿ, ಇತರೆ ಕಾದಂಬರಿಗಳಲ್ಲಿ ಮತ್ತು ಸ್ವತಃ ಅವರ ಬಾಲ್ಯವನ್ನು ಕಳೆದಂತಹ ಗೋಕರ್ಣದ ಸಮೀಪದಲ್ಲಿರುವ ಹನೇಹಳ್ಳಿ ಮತ್ತು ಕಾರವಾರದ್ದಾಗಿದೆ. ಕರಾವಳಿ ಪ್ರದೇಶದ ಗ್ರಾಮೀಣ ಸಮಾಜದ ಚಿತ್ರಣವನ್ನು ಮೂರುದಾರಿಗಳು ಓದುಗರಿಗೆ ಕಟ್ಟಿಕೊಡುತ್ತದೆ.

ಅಲ್ಲಿನ ಹಳ್ಳಿಗಳಲ್ಲಿನ ಮನೆಗಳ ಸ್ವರೂಪವನ್ನು ಚಂದ್ರಭಾಗಿ, ವಿಶ್ವನಾಥ ಮತ್ತು

ವಾಸುದೇವರ ಮನೆಗಳ ಕಾದಂಬರಿಯ ಬಹುಭಾಗ ಘಟಿಸುವುದರಿಂದ ತಿಳಿದುಬರುತ್ತದೆ. ಕುಮಟೆಯಲ್ಲಿ ತುಂಗಕ್ಕನ ನೇತೃತ್ವದಲ್ಲಿ ಹಪ್ಪಳ ಮೂಡುವ ದೃಶ್ಯ ಗ್ರಾಮ್ಯಗಳಲ್ಲಿನ ಸಹಕಾರದ ಚಿತ್ರಣದ ಜೊತೆಗೆ ಅಂತಹ ಸನ್ನಿವೇಶಗಳಲ್ಲಿ ಅಲ್ಲಿ ನಡೆಯುವ ವಿಚಾರ ವಿನಿಮಯಗಳ ನೈಜತೆಯನ್ನು ಕಾಣಬಹುದು. ಕಾದಂಬರಿಯ ಪ್ರಾರಂಭದಲ್ಲಿ ವಿಶ್ವನಾಥರ ಕುಮಟೆಯ ಪ್ರಯಾಣ ಸ್ಥಳೀಯರ ಪ್ರಯಾಣದ ಕಷ್ಟಗಳನ್ನು ನಿರೂಪಿಸುತ್ತದೆ. ನಿರ್ಮಲೆಯು ಇಂಗ್ಲಿಷ್ ವಿದ್ಯಾಭ್ಯಾಸ ಪಡೆಯುವುದು ಅಂದಿನ ಕೆಲವೇ ಹೆಣ್ಣುಮಕ್ಕಳಿಗೆ ಲಭ್ಯವಾಗುತ್ತಿದ್ದ ಅವಕಾಶವಾಗಿದೆ. ಹಾಗೆ ಅವಕಾಶ ಲಭಿಸಿದಂತಹ ಹೆಣ್ಣುಮಕ್ಕಳು ನಿರ್ಮಲೆ ಎದುರಿಸಿದಂತಹ ಸಮಸ್ಯೆಗಳನ್ನು ಅನುಭವಿಸಬೇಕಾಗುತ್ತದೆ ಎಂಬ ನಿದರ್ಶನದಂತೆ ನಿರ್ಮಲೆ ಕಾಣಿಸುತ್ತಾಳೆ.

ತುಂಗಕ್ಕನಂತವರು ಪ್ರಕರಣದ ಸಂಪೂರ್ಣ ಮಾಹಿತಿಯೇ ಇಲ್ಲದೆ ತಮ್ಮ ಕಲ್ಪನಾಶಕ್ತಿಗೆ ಅನುಗುಣವಾಗಿ ಪ್ರಕರಣವನ್ನು ಪ್ರಚಾರಮಾಡುವ ಮೂಲಕ ಅದು ಅಷ್ಟಕ್ಕೆ ನಿಲ್ಲದೆ ಕುಮಟೆಯನ್ನು ಮುಟ್ಟಿ ಅಲ್ಲಿನ ಜನರ ಬಾಯಿಗೆ ಆಹಾರವಾಗುವುದರ ಜೊತೆಗೆ ವಾಸುದೇವನ ತಾಯಿಯನ್ನು ನೇರವಾಗಿ ಭೇಟಿ ಮಾಡಿ ಬರುತ್ತಾಳೆ. ಇದೆಲ್ಲವು ಇಂದಿಗೂ ಗ್ರಾಮಗಳಲ್ಲಿ ಪ್ರಸ್ತುತವಾಗಿರುವುದು ಉಂಟು. ಹಾಗಾಗಿ ಗ್ರಾಮೀಣ ಸಮಾಜದ ಪ್ರಸ್ತುತತೆಯನ್ನು ಈ ಕಾದಂಬರಿಯ ಕೆಲವು ಸನ್ನಿವೇಶಗಳು ಸಾರಿ ಹೇಳುತ್ತವೆ.

ಶೀನ್ನನ ಹೆಂಡತಿ ಮತ್ತು ನೆರೆಮನೆಯ ಆನಂದಿ, ಪದ್ಮಾವತಿಯರು ಬಾವಿಯಿಂದ ನೀರು ಸೇದುವಾಗ ಮತ್ತೆ ಅದೆ ನಿರ್ಮಲೆಯ ಚಾರಿತ್ರದ ಚರ್ಚೆ ಮಾಡುತ್ತಾರೆ. ಅದೇ ರೀತಿ ನಿರ್ಮಲೆಯ ಪಕ್ಕದ ಮನೆಯ ಹೆಂಗಸರು ಬೆರಣಿ ತಟ್ಟುವಾಗಲು ಅವಳ ಬಗ್ಗೆ ಮತ್ತು ವಾಸುದೇವನ ಬಗ್ಗೆ ಮಾತಾಡುತ್ತಾರೆ. ಈ ಎರಡು ಸನ್ನಿವೇಶಗಳು ಕೆಲಸ ಮಾಡುವ ಸಂದರ್ಭದಲ್ಲಿ ಹಿಂದೆ ಗ್ರಾಮೀಣರು ತಮ್ಮಲ್ಲಿನ ಸೃಜನಶೀಲತೆಯಿಂದ ಜನಪದ ಸಾಹಿತ್ಯದ ಸೃಷಿಮಾಡುತ್ತಿದ್ದರೆ ; ಇಂದು ಇಂಥ ಸಲ್ಲದ ಪ್ರಕರಣಗಳ ಚರ್ಚೆ ನಡೆಯುವ ಚಿತ್ರಣ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಸಮಾಜದ ಇಂಥ ಚಿತ್ರಣಗಳು ಪ್ರಸ್ತತ ಎನ್ನಿಸುತ್ತದೆ.

ವಾಸುದೇವನ ತಾಯಿ ಸೀತಕ್ಕ ದೇವಸ್ಥಾನಕ್ಕೆ ಹೋಗಿ ಬರುವ ಸನ್ನಿವೇಶದಲ್ಲಿ ಹಳ್ಳಿಮಕ್ಕಳು ವಾಸುದೇವನ ಬಗ್ಗೆ ಹೊಂದಿರುವ ಗೌರವಾಭಿಮಾನಗಳನ್ನು ಕಂಡು ಆಕೆಯ ಮನಸ್ಸಿಗೆ ನೆಮ್ಮದಿ ಎನ್ನಿಸುತ್ತದೆ. ಅಲ್ಲದೆ ದತ್ತ ಮಾಸ್ತರರ ಮಾತಿನ ಮೂಲಕ ತನ್ನ ಪತಿಯ ಜಾತ್ಯಾತೀತ ಮನೋಭಾವ ನೆನಪಾಗುತ್ತದೆ. ಹಳ್ಳಿಯಲ್ಲಿದ್ದು, ಧಾರ್ಮಿಕನಾಗಿದ್ದರೂ ಸಹ ಆತನ ಆಲೋಚನೆಯ ರೀತಿ



Scanned with CamScanner

ಭಿನ್ನವಾಗಿದುದು, ಅಲ್ಲಿನ ಚಾಡಿಕೋರ ಜಗತ್ತಿಗಿಂತ ವಿಭಿನ್ನವಾದ ಜಗತ್ತೊಂದರ ಪರಿಚಯವಾಗುತ್ತದೆ. ಗ್ರಾಮೀಣ ಪ್ರದೇಶ ಕೆಲವು ನೈತಿಕ ಮತ್ತು ವೈಚಾರಿಕ ಆಲೋಚನೆಗಳ ಪ್ರತೀಕವಾಗಿದೆ.

ಅಂಗಡಿಯ ನೀಲಕಂಠ ಬೆಳಕಿರುವಾಗಲೇ ಪೆಟ್ರೋಮೆಕ್ಸ್ ಹೊತ್ತಿಸುವುದು ನಾಗರಿಕತೆಯನ್ನು ಸ್ವಾಗತಿಸುವ ಸಂಕೇತವಾಗುತ್ತವೆ.

ಶೀನನ ಮನೆಗೆ ವಾಸುದೇವನನ್ನು ಊಟಕ್ಕೆ ಕರೆಯುವಾಗ ಸುಬ್ಬ ಮತ್ತು ಅವನ ಹೆಂಡತಿ, ಅಕ್ಕ ಕಾವೇರಿಯನ್ನು ಕರೆಯುವ ಮೂಲಕ ಗ್ರಾಮೀಣ ಸಮಾಜದಲ್ಲಿ ಕೆಡುಕು ಮಾಡಿದವರನ್ನು ಕ್ಷಮಿಸಿ ಅವರ ಮಧ್ಯೆ ಏರ್ಪಡುವ ಬಾಂಧವ್ಯಗಳನ್ನು ಕಾಣಬಹುದಾಗಿದೆ. ಹನೇಹಳ್ಳಿಯಲ್ಲಿ ನಿರ್ಮಲೆ ಮದುವೆಯ ದಿಬ್ಬಣವನ್ನು ನೋಡುವ ಚಿತ್ರಣದ ಮೂಲಕ ಹಳ್ಳಿಗಳಲ್ಲಿ ನಡೆಯುವ ಮದುವೆಯ ಶಾಸ್ತ್ರಾಚರಣೆಗಳನ್ನು ಚಿತ್ರಿಸಲಾಗಿದೆ. ಬೆರಣಿ ಬಡಿಯುವ ಮತ್ತು ಗಾಣದಲ್ಲಿ ಎಣ್ಣೆ ಹಿಂಡುವ ಕ್ರಿಯೆಗಳು ಇಂದಿನ ಗ್ರಾಮಗಳಲ್ಲಿ ಸಮಾಜಗಳು ವಿರಳವಾಗಿವೆ. ವಿಶ್ವನಾಥನಿಗೆ ಬರುವ ಪತ್ರ ಮತ್ತು ಟೆಲಿಗ್ರಾಂಗಳ ವಿಚಾರ ಇಂದಿನ ಯಾವುದೇ ಸುದ್ದಿ ಮಾಧ್ಯಮಗಳು ಅಷ್ಟು ವೇಗವಾಗಿ ಪ್ರಚಾರ ಮಾಡಲಾರದ ರೀತಿಯಲ್ಲಿ ಇಡೀ ಊರನ್ನು ವ್ಯಾಪಿಸಿಕೊಳ್ಳುತ್ತವೆ.

ಒಟ್ಟಾರೆಯಾಗಿ ಅಬೋಲೀನಳ ರೀತಿಯಲ್ಲಿಯೇ ನಿರ್ಮಲೆಯು ಸಮಾಜದ ಚುಚ್ಚು ಮಾತುಗಳಿಗೆ, ಚಾಡಿಕೋರತನಕ್ಕೆ, ಪ್ರಚಾರ ಪ್ರಿಯತೆಗೆ ಸರಿಯಾದ ರೀತಿಯಲ್ಲಿ ಪ್ರತಿಭಟಿಸಲಾಗದೆ ತನ್ನ ಸಾವನ್ನೇ ಉತ್ತರವಾಗಿ ನೀಡುವ ಮೂಲಕ ಕಾದಂಬರಿ ಅಂತ್ಯಗೊಳ್ಳುತ್ತದೆ. ಗ್ರಾಮೀಣ ಸಮಾಜಗಳು ಚಿಕ್ಕವಾಗಿರುವುದರಿಂದ ವಿಚಾರಗಳು ಬಹುಬೇಗ ಹೊಸರೂಪ ಪಡೆದು ಪ್ರಸಾರವಾಗುವ ಚಿತ್ರಣ ಕಾದಂಬರಿಯಲ್ಲಿ ಮೂರು ವಿಭಿನ್ನ ದಾರಿಗಳಲ್ಲಿ ಸಾಗಿದೆ.

ಲಂಕೇಶರು ತಮ್ಮ ಜೀವನದ ಪ್ರಾರಂಭದ ಇಪ್ಪತ್ತು ವರ್ಷಗಳನ್ನು ಗ್ರಾಮದಲ್ಲಿ ಕಳೆದಿರುವುದರಿಂದ ಹಳ್ಳಿಗಳ ನಾಡಿಮಿಡಿತವನ್ನು ಬಲ್ಲವರಾಗಿದ್ದಾರೆ. ಗ್ರಾಮ್ಯ ಜೀವನದ ಬಗ್ಗೆ ಅವರಲ್ಲಿಯ ಅಗಾಧ ಅನುಭವ ಇಲ್ಲಿನ ಘಟನೆಗಳ ಜೋಡಣೆಯಲ್ಲಿ ಅಭಿವ್ಯಕ್ತಿಗೊಂಡಿದೆ.

ಮುಸ್ಸಂಜೆಯ ಕಥಾಪ್ರಸಂಗದಲ್ಲಿ ಗ್ರಾಮಗಳು ನಾನಾ ಕಾರಣಗಳಿಂದ ಅವಸಾನದ ಅಂಚಿನಲ್ಲಿರುವುದನ್ನು ಅಲ್ಲಿನ ಆಂತರಿಕ ಕಲಹಗಳಲ್ಲಿ ಕಾಣಬಹುದಾಗಿದೆ. ಅದೇ ರೀತಿಯ ಗ್ರಾಮ ಸಮಾಜ ಒಂದರ ಪ್ರಳಯ ಸ್ವರೂಪವನ್ನು ತೇಜಸ್ವಿಯವರ 'ಚಿದಂಬರ ರಹಸ್ಯ'ದಲ್ಲಿ ವಿಭಿನ್ನವಾದ ಕಥಾ ಹಂದರದಲ್ಲಿ ಕಾಣಬಹುದಾಗಿದೆ.



Scanned with CamScanner

ಜುಗಾರಿಕ್ರಾಸಿನಲ್ಲಿರುವಂತೆಯೇ ಇಲ್ಲಿ ಕಳ್ಳಕದೀರಮರ ಹಾವಳಿಗೆ ರಾಜ್ಯದ ನಿರ್ದಿಷ್ಟ ಪ್ರವೇಶ ಒಳಪಟ್ಟಿರುವ ಚಿತ್ರಣವಿದೆ.

ಕಾದಂಬರಿಯ ಕ್ರಿಯೆ ಘಟಿಸುವುದು ದಕ್ಷಿಣ ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯ ಕೆಸರೂರು ಎಂಬ ಗ್ರಾಮ. ಇಲ್ಲಿನ ಅರಣ್ಯ ಸಂಪತ್ತು ದೋಚಲ್ಪಟ್ಟಿದೆ. ಏಲಕ್ಕಿ ಬೆಳೆ ರೋಗಗ್ರಸ್ತವಾಗಿದೆ. ಇದೆಲ್ಲವು ಗ್ರಾಮದ ಸ್ಥಿತಿಯನ್ನು ಸಾಂಕೇತವಾಗಿ ಸೂಚಿಸುತ್ತದೆ. ಆ ಊರಿನ ಸಂಸ್ಕೃತಿ ಮುದಿಯಾಗಿದೆ. ಮನೆಗಳಲ್ಲಿನ ಎಳೆಯ ಜೀವಗಳಿಗೆ ವಿಕಾಸಗೊಳ್ಳಲು ಅವಕಾಶ ಮಾಡಿಕೊಡುವುದರ ಬದಲು ಎಳೆತರಲೇ ಮುದಿತನವನ್ನು ತುಂಬಿ ಬೆಂತರ ಲೋಕ ಒಂದನ್ನು ಸೃಷ್ಟಿಸಿದ್ದಾರೆ.

ಕೆಸರೂರಿನಲ್ಲಿ ವೈಯಕ್ತಿಕತೆ ಸ್ವಾರ್ಥ ಸಾಧನೆಗಾಗಿ ಎರಡು ಗುಂಪುಗಳನ್ನು ಶ್ರೀಮಂತನಾದ ಏಲಕ್ಕಿ ಬೆಳೆಗಾರ ಮತ್ತು ವ್ಯಾಪಾರಿಯಾದ ಕೃಷ್ಣೇಗೌಡ ಹಾಗೂ ಅರಣ್ಯ ಖಾತೆಯ ಕಂತ್ರಾಟದಾರ ಮತ್ತು ಕಳ್ಳಸಾಗಾಟದಾರನಾದ ಸುಲೇಮಾನ್ ಬ್ಯಾರಿ ಸೃಷ್ಟಿಸುತ್ತಾರೆ. ಈ ಗುಂಪುಗಳಿಗೆ ಧರ್ಮ, ಹಣ, ರಾಜಕೀಯದ ಅಗತ್ಯಕ್ಕೆ ತಕ್ಕಂತೆ ಬಳಸಿಕೊಂಡು ಗ್ರಾಮ ಸಮಾಜವನ್ನು ಕೆಡಿಸಿ ಸ್ವಾರ್ಥ ವ್ಯವಹಾರಿಕ್ಕೆ ಜಾತೀಯ ದಂಗೆಗಳನ್ನು ಪ್ರಚೋದಿಸುತ್ತಾರೆ.

ಏಲಕ್ಕಿ ಬೆಳೆ ಕುಸಿತಕ್ಕೆ ಕಾರಣ ಪತ್ತೆ ಮಾಡಲು ಕೇಂದ್ರ ಸರ್ಕಾರವು ಶಾಮನಂದನ ಅಂಗಡಿ ಅವರನ್ನು ಕಳುಹಿಸುತ್ತದೆ. ಆದರೆ ಅವರು ಏಲಕ್ಕಿ ಸಂಶೋಧನ ಕೇಂದ್ರದ ನಿಯಂತ್ರಕನಾದ ಡಾ. ಪಾಟೀಲ ಕೆಸರೂರು ಅವರಿಗಿಂತ ಮೊದಲಿದ್ದ ಡಾ. ಜಾಲೀಗಾಳನ ರಹಸ್ಯ ಸಾವಿನ ಶೋಧದಲ್ಲಿ ನಿರತರಾಗುತ್ತಾರೆ.

ಇನ್ನು ಡಾ. ಪಾಟೀಲ ಕೆಸರೂರಿನ ಏಲಕ್ಕಿ ತಳಿಯ ಮೂಲ (ತಾಯಿ) ಗಿಡವನ್ನು ಹುಡುಕುವ ಗುರಿಯನ್ನು ಹೊಂದಿರುತ್ತಾರೆ. ಸ್ಥಳೀಯ ಕಾಲೇಜೊಂದರ ಅರ್ಥಶಾಸ್ತ್ರ ಪ್ರಾಧ್ಯಾಪಕ ಡಾ. ರಾಮಚಂದ್ರ ಕೆಸರೂರಿನ ದುರ್ಬಲ ಯುವಕರ ಮೂಲಕ ಸಾಮಾಜಿಕ ಕ್ರಾಂತಿಯನ್ನು ತರುವ ಆಸೆಯಲ್ಲಿದ್ದಾರೆ. ಕಲಾವಿದ ಚಿಂತಕ ಡಾ. ಜಯರಾಮ ಮಾನವ ಪ್ರಜ್ಞೆ, ಜೀವನಾನುಭವದ ಅರ್ಥ ಹೀಗೆ ಅನೇಕ ಪ್ರಶ್ನೆಗಳ ಬೆನ್ನು ಹತ್ತಿದವರು. ಇವರೆಲ್ಲರು ಗ್ರಾಮಾಯಣದ ಪಾದಳ್ಳಿಗೆ ಹೊರಗಿನಿಂದ ಬಂದವರಂತೆಯೇ ಕೆಸರೂರಿಗೂ ಹೊರಗಿನಿಂದ ಬಂದವರು. ಆದರೆ ಎಲ್ಲರು ಒಂದೊಂದು ಉದ್ದೇಶ ಅಥವಾ ಗುರಿಗಳಿಂದ ಬಂದಿದ್ದಾರೆ. ಈ ಉದ್ದೇಶ ಗುರಿಗಳೆಲ್ಲವು ಸಫಲತೆಯನ್ನು ಕಾಣುವುದಿಲ್ಲವಾದರು ಕೆಸರೂರಿಗೆ ಹೊಸ ಮನ್ವಂತರವನ್ನು ತಂದುಕೊಡಲು ನೆರವಾಗುತ್ತವೆ.

ಎರಡು ವಿರೋಧಿ ಗುಂಪುಗಳಿಗೆ ಸೇರಿದ ರಫಿ ಮತ್ತು ಜಯಂತಿಯರ



Scanned with CamScanner

ಮಿಲನ ಮಾನವೀಯ ಐಕ್ಯತೆಯ ಸಂಕೇತವಾಗಿ ಕೆಸರೂರಿನ ಮುದಿತನದ ಜಡತ್ವದ ಸ್ಥಾನಕ್ಕೆ ಹೊಸ ಚೈತನ್ಯದ ಆಗಮನವನ್ನು ಸೂಚಿಸುತ್ತದೆ. ಜೀವನ ಶ್ರದ್ಧೆಯ ಸಂಕೇತವಾಗುತ್ತದೆ. ಕೆಸರೂರಿನ ಸುಟ್ಟ ಬೂದಿಯಿಂದಲೇ ಫೀನಿಕ್ಸ್ ಪಕ್ಷಿಯಂತೆ ಹೊಸತನ ಹುಟ್ಟುವುದನ್ನು ಕಾಣಬಹುದಾಗಿದೆ.

ಹೀಗೆ ಚಿದಂಬರ ರಹಸ್ಯ ಒಂದು ಪತ್ತೇದಾರಿಯ ಸತ್ವವನ್ನು ಮೊದಲಿಗೆ ಉಣಬಡಿಸಿದರು ನಂತರ ಗ್ರಾಮೀಣ ಸಮಾಜದ ಜಾತಿ ವೈಷಮ್ಯದ ಚಿತ್ರಣ, ಮೂಢನಂಬಿಕೆಗಳು, ಕ್ರಾಂತಿ, ರಾಜಕೀಯ, ಅಂತರ್‌ಜಾತೀಯ ಅಥವಾ ಅಂತರ್ ಧರ್ಮೀಯ ಪ್ರೀತಿ, ಸ್ನೇಹ ಹೀಗೆ ಒಂದೊಂದು ಹಂತದಲ್ಲಿ ಒಂದೊಂದು ವಿಷಯಗಳನ್ನು ಚಿತ್ರಿಸುತ್ತಾ ಇವೆಲ್ಲವುಗಳನ್ನು ಒಳಗೊಂಡ ಸಮಾಜ ಒಂದರ ಸಮಗ್ರ ಸಂಗ್ರಹದಂತೆ ಭಾಸವಾಗುತ್ತದೆ.

ಮುಸ್ಸಂಜೆ ಕಥಾ ಪ್ರಸಂಗ, ಚಿದಂಬರರಹಸ್ಯ ಈ ಕಾದಂಬರಿಗಳಲ್ಲಿಯೂ ಹಳ್ಳಿಗಳಲ್ಲಿ ಆಂತರಿಕ ಕಲಹಗಳ ಮೂಲಕ ಜಾತಿ ವೈಷಮ್ಯಗಳಿಂದಾಗಿ, ಸ್ವಾರ್ಥದಿಂದಾಗಿ ಇಡೀ ಗ್ರಾಮವನ್ನೇ ಅವನತಿಯತ್ತ ಕೊಂಡೊಯ್ಯುವ ಚಿತ್ರಣ ಸಾಧಾರಣವಾಗಿ ಕಂಡುಬಂದರೂ ಮುಸ್ಸಂಜೆ ಕಥಾ ಪ್ರಸಂಗದ ಸಾವಂತ್ರಿ ಮಂಜ ಮತ್ತು ಚಿದಂಬರ ರಹಸ್ಯದ ರಫಿ ಮತ್ತು ಜಯಂತಿಯರು ಆ ಗ್ರಾಮಗಳ ಹೊಸಹುಟ್ಟಿಗೆ ಕಾರಣರಾಗುವ ಆಶಾಭಾವನೆಯನ್ನು ಗುರ್ತಿಸಬಹುದ್ದಾಗಿದೆ.

ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಕಾದಂಬರಿಗಳಲ್ಲಿ 'ಗ್ರಾಮ'ಗಳು ಬಹು ಮುಖ್ಯ ಪಾತ್ರವಹಿಸುವಂತೆಯೇ ಗ್ರಾಮೀಣ ಸಮಾಜಗಳಲ್ಲಿನ ಸ್ಥಿತ್ಯಂತರ ಮತ್ತು ಗಾಢವಾದ ಕಾಡಿನ ಸೆಳೆತ ಕಂಡುಬರುತ್ತದೆ. ಗ್ರಾಮ ಜೀವನ ಮತ್ತು ಕಾಡುಗಳು ಕಾದಂಬರಿಯ ಕೇಂದ್ರ ಪಾತ್ರಗಳಷ್ಟೇ ಪ್ರಮುಖ್ಯತೆಯನ್ನು ಪಡೆಯುತ್ತವೆ. ಜುಗಾರಿಕ್ರಾಸ್, ಕರ್ವಾಲೊಗಳಲ್ಲಿ ಪ್ರಕೃತಿಯೂ ಒಂದು ಮುಖ್ಯ ಪಾತ್ರವಹಿಸುತ್ತದೆ. ಗ್ರಾಮಗಳ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನು ನಿರೂಪಿಸುವಂತೆಯೇ ಓದುಗರಿಗೆ ಪ್ರಕೃತಿಯ ವಿಸ್ಮಯಗಳನ್ನು ಅನನ್ಯವಾಗಿ ಚಿತ್ರಿಸುತ್ತಾರೆ. ಅವರ ಕೃತಿಗಳು ಬಹುಮುಖಿ ಆಯಾಮವನ್ನೊಳಗೊಂಡು ನಾನಾ ವಿಚಾರಗಳ ಅರಿವು ನೀಡುತ್ತವೆ.

'ಕರ್ವಾಲೊ' ಮೂಲಕ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಕೀಟಶಾಸ್ತ್ರಜ್ಞ, ಸಸ್ಯವಿಜ್ಞಾನಿ ಸಾಮಾನ್ಯನಂತೆ ಹಳ್ಳಿಯ ಜನ ಮತ್ತು ಪರಿಸರದೊಂದಿಗೆ ಬೆರೆತು ಮಂದಣ್ಣನಂತವನ ಜ್ಞಾನದ ಅಗಾದತೆಯ ಬಗ್ಗೆ ನಿವೇದಕ ಮತ್ತು ಮೊದಲಾದವರಿಗೆ ಅರಿವು ಮೂಡಿಸುತ್ತಾನೆ. ದೇಶ-ಕಾಲಗಳ ಆಚೆಗಿನ ಹಾರುವ ಓತದ ಮೂಲಕ ಒಂದು ವಿಸ್ಮಯ ಪ್ರಪಂಚಕ್ಕೆ ಓದುಗರನ್ನು ಕಾದಂಬರಿ ಕೊಂಡೊಯ್ಯುತ್ತದೆ.



Scanned with CamScanner

ತೇಜಸ್ವಿ ಅವರ ಜುಗಾರಿಕ್ರಾಸ್ ಕಾದಂಬರಿಯು ಗ್ರಾಮೀಣ ಸಾಮಾಜಿಕ ಜೀವನದ ಮೇಲೆ ಜಾಗತೀಕರಣದ ಪ್ರಭಾವ, ಲಾಟರಿ ಅವ್ಯವಹಾರ, ಮಾಫಿ, ಕಳ್ಳ ಸಾಗಾಣಿಕೆ ಹೀಗೆ ನಾನಾ ವಿಚಾರಗಳನ್ನು ಒಳಗೊಂಡು ಒಂದು ಪತ್ತೆದಾರಿ ಕಾದಂಬರಿಯ ಓಟವನ್ನು ಪಡೆಯುತ್ತದೆ.

'ಜುಗಾರಿಕ್ರಾಸ್' ತೇಜಸ್ವಿ ಅವರೆ ಹೇಳುವಂತೆ ಇದೊಂದು 'ರೊಮ್ಯಾಂಟಿಕ್ ಥ್ರಿಲ್ಲರ್' ನೀಡುವ ಕಾದಂಬರಿ. ಕೇವಲ ಇಪ್ಪತ್ನಾಲ್ಕು ಗಂಟೆಗಳಲ್ಲಿ ನಡೆಯುವ ಘಟನಾವಳಿಗಳನ್ನು ಹೆಣೆಯುತ್ತಾ ಒಂದು ಬಗೆಯ ಸಿಂಹಾವಲೋಕನಕ್ಕೆ ಒಳಪಟ್ಟ ಕಾದಂಬರಿಯ ನಿರೂಪಣೆಯ ತಂತ್ರ ಶತಮಾನಗಳಷ್ಟು ಹಿಂದಕ್ಕೂ ಕರೆದೊಯ್ಯುತ್ತದೆ. ಇಲ್ಲಿನ ಒಂದೊಂದು ವಾಕ್ಯವೂ ಒಂದೊಂದು ಸ್ಥಳೀಯ ಸಾಮಾಜಿಕ ಸ್ಥಿತಿಗತಿಗಳನ್ನು ಬಿಚ್ಚಿಡುತ್ತದೆ. ಇಲ್ಲಿನ ಯಾವ ಮಾತು ಯಾವ ಸನ್ನಿವೇಶವು ವ್ಯರ್ಥ ಅಥವಾ ಅಸಂಗತವಲ್ಲ ಎಲ್ಲವೂ ಸಹ್ಯಾದ್ರಿಯ ತಪ್ಪಲಿನ ವಾಸ್ತವ ಸಾಮಾಜಿಕ ಸನ್ನಿವೇಶಗಳನ್ನು ಪ್ರತಿಮೆಗಳ ಮೂಲಕ ಕಾವ್ಯಾತ್ಮಕವಾಗಿ ಕಟ್ಟಿಕೊಟ್ಟಿವೆ. ಹಾಗಾಗಿಯೇ ಇದೊಂದು ವಾಸ್ತವ ಸಾಮಾಜಿಕ ಕಾದಂಬರಿ. ಅದಲ್ಲದೆ ತೇಜಸ್ವಿ ಅವರ ಕಾದಂಬರಿಗಳಲ್ಲಿ ಕಂಡುಬರುವ ವಿನೋದ, ಪತ್ತೇದಾರಿ ಗುಣ, ಕಾಡಿನ ಸಂಸರ್ಗ, ಗ್ರಾಮದ ತಲ್ಲಣಗಳನ್ನು ಒಳಗೊಂಡಿದೆ.

ಜುಗಾರಿಕ್ರಾಸಿನ ಪ್ರವೇಶದಲ್ಲಿಯೇ ಫಾರೆಸ್ಟರ್ ಇಕ್ಬಾಲ್‌ನ ಮೂಲಕ ಗ್ರಾಮಗಳನ್ನು ಬಿಡದ ಭ್ರಷ್ಟಾಚಾರ ಮತ್ತು ಅಧಿಕಾರಶಾಹಿವರ್ಗ ಮುಗ್ಧ ರೈತರ ಮೇಲೆ ನಡೆಸುವ ದೌರ್ಜನ್ಯವನ್ನು ಚಿತ್ರಿಸುತ್ತದೆ. ರೈತರ ಹೆಗಲ ಮೇಲಿರುವ ಹಸಿರು ಟವಲುಗಳು ಅವರ ಸಂಕೇತಗಳಾಗಿವೆ. ಈ ಮೂಲಕ ಸ್ಥಳೀಯ ರಾಜಕೀಯ, ಅಧಿಕಾರಿಶಾಹಿತ್ವವನ್ನು ಮತ್ತು ಅವರು ನಡೆಸುವ ದೌರ್ಜನ್ಯವನ್ನು ಎತ್ತಿತೋರಿಸುವುದು.

ಇನ್ನು ಮೇದರಹಳ್ಳಿಯ ಅವಸಾನ ನವನಾಗರಿಕತೆಯ ರಾಕ್ಷಸಿ ಪ್ರವೃತ್ತಿ ಪ್ರಕೃತಿಯ ಮೇಲೆ ನಡೆಸುವ ಹಲ್ಲೆ ಮತ್ತು ಆತಂಕಗಳನ್ನು ಒಳಗೊಂಡಿದೆ. ಮಂಗಳೂರು ನಿಂದ ಬೆಂಗಳೂರು ಮಾರ್ಗವಾಗಿ ಸಿಗುವ ನಿಸರ್ಗದ ಮಡಿಲಿನಲ್ಲಿರುವ ಒಂದು ಪುಟ್ಟ ಗ್ರಾಮ ಮೇದರಹಳ್ಳಿ, ಇದು ಮೇದರು ನೆಲೆಸಿರುವ ತಾಣ. ಇದು ಮೇದರ ಸಮಾಜದ ಜೀವನಕ್ರಮ, ಒಂದು ಬುಡಕಟ್ಟನ್ನು ಮತ್ತು ಅವರ ಬದುಕಿನ ಸಹಜತೆಯ ಚಿತ್ರಣವನ್ನು ಈ ಭಾಗ ನೀಡುತ್ತದೆ. ಅಷ್ಟೇ ಅಲ್ಲದೆ ಜಾಗತೀಕರಣದ ದುಷ್ಪರಿಣಾಮದಿಂದಾಗಿ ಶತಮಾನಗಳ ಇತಿಹಾಸವನ್ನು ಹೊಂದಿರುವ ಒಂದು ಕಲೆ ಮತ್ತು ಒಂದು ಬುಡಕಟ್ಟಿನ ಸರ್ವನಾಶವನ್ನು ಒಳಗೊಂಡಿದೆ.

ಆಧುನಿಕತೆ ಮತ್ತು ಪರಂಪರೆಯ ಮುಖಾಮುಖಿಯನ್ನೊಳಗೊಂಡಿದೆ.



Scanned with CamScanner

ಇಂದು ಪ್ರಕೃತಿಗೆ ಮಾರಕವಾಗಿರುವ ಪ್ಲಾಸ್ಟಿಕ್‌ನ ಪ್ರವೇಶ ಹೇಗೆ ಒಂದು ಮೂಲಸಂಸ್ಕೃತಿಯ ಬೇರುಗಳನ್ನೇ ನಾಶಮಾಡಿತೆಂಬುದನ್ನು ಮೇದರಹಳ್ಳಿಯ ಅವಸಾನ ಒಳಗೊಂಡಿದೆ. ಇದರ ಜೊತೆಯಲ್ಲಿ ಬಿದುರಿಗೆ ಕಟ್ಟೆ ಬರುವುದನ್ನು ಚಿತ್ರಿಸಲಾಗಿದೆ.

ಕಾದಂಬರಿ ಕಾಲ್ಪನಿಕ ಸನ್ನಿವೇಶಗಳಾದರೂ ಅನೇಕ ವಾಸ್ತವಿಕ ಸಾಮಾಜಿಕ ಸಮಸ್ಯೆಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ. ಅಷ್ಟೇ ಅಲ್ಲದೆ ಗ್ರಾಮೀಣ ಪ್ರದೇಶದ ಜೀವನದ ಮೇಲೆ ಭ್ರಷ್ಟಾಚಾರ, ಜಾಗತೀಕರಣದ ಪ್ರಭಾವ, ಲಾಟರಿ ಅವ್ಯವಹಾರ, ಮಾಫಿಯಾ, ಕಳ್ಳ ಸಾಗಾಣಿಕೆ, ಚೆಕ್ ಅವ್ಯವಹಾರ, ನಕಲಿವೈದ್ಯಕೀಯ, ಕಳ್ಳ ನೋಟುಗಳ ವ್ಯವಹಾರ, ಮಂಡಿ ಅವ್ಯವಹಾರಗಳು, ದಲ್ಲಾಳಿಗಳ ನಯವಂಚಕತನ, ಜೋಬುಗಳ್ಳರ ವ್ಯವಹಾರ, ಕುದುರೆ ಜೂಜು.... ಹೀಗೆ ನಾನಾ ವಿಚಾರಗಳನ್ನು ಒಳಗೊಂಡು ಒಂದು ಪತ್ತೇದಾರಿ ಕಾದಂಬರಿಯ ಓಘವನ್ನು ಪಡೆಯುತ್ತದೆ.

ಗ್ರಾಮೀಣ ಪರಿಸರದಲ್ಲೂ ಭೂಗತ ಜಗತ್ತು ತಲೆ ಎತ್ತುತ್ತಿರುವುದನ್ನು ಕುರಿತು ಹೇಳಿದ ಕಾದಂಬರಿಗಳಲ್ಲಿ ಜುಗಾರಿಕ್ರಾಸ್ ಮುಖ್ಯವಾದುದು. ಹಾಗೇ ಗ್ರಾಮೀಣ ಸಾಮಾಜಿಕ ಪರಿಸರದಲ್ಲಿ ಭೂಗತ ಜಗತ್ತು ತನ್ನ ಪ್ರವೃತ್ತಿಯನ್ನು ಚಲಾಯಿಸಲು ಮುಂದಾದರೆ ಏನೆಲ್ಲಾ ಅವಾಂತರಗಳಿಗೆ ಕಾರಣವಾಗುತ್ತದೆ ಎನ್ನುವುದನ್ನು ಈ ಕಾದಂಬರಿಯಲ್ಲಿ ಕಾಣಬಹುದು.

ಹಾಗೇ ನೋಡಿದರೆ 'ಜುಗಾರಿಕ್ರಾಸ್' ಮತ್ತು 'ಕರ್ವಾಲೋ' ಮಲೆನಾಡಿನ ಪರಿಸರದ ಬದುಕನ್ನಾಧರಿಸಿದ ವಸ್ತುವಾದರು, ಕುವೆಂಪು ಅವರಂತೆ ಮಲೆನಾಡನ್ನು ವರ್ಣಿಸುವ ಚಿತ್ರಣ ಇಲ್ಲಿ ಕಂಡುಬರುವುದಿಲ್ಲ. ಬದಲಾಗಿ ಮಲೆನಾಡಿನ ಬದುಕನ್ನು ವಿಮರ್ಶೆಗೆ ಒಡ್ಡುವ ಮತ್ತು ವೈಚಾರಿಕವಾಗಿ ನೋಡುವ ಚಿತ್ರಣವೇ ಮುಖ್ಯವಾಗಿರುವುದನ್ನು ಕಾಣಬಹುದು.

ತೇಜಸ್ವಿ ಅವರ ಕಾದಂಬರಿಗಳು ಇತರ ನವ್ಯ ಕಾದಂಬರಿಗಳಿಗಿಂತ ಭಿನ್ನವಾದ ವಸ್ತು, ತಂತ್ರ, ನಿರೂಪಣೆಯ ಜೊತೆಗೆ ವಾಸ್ತವ ಬದುಕಿಗೆ ಸಮೀಪವಾದವುಗಳಾಗಿವೆ. ಜೊತೆಗೆ ಅವುಗಳ ಪತ್ತೆದಾರಿಗುಣಗಳಿಂದ ಕುತೂಹಲ ಕೆರಳಿಸುತ್ತವೆ. ಈ ಮೂಲಕ ಗ್ರಾಮ್ಯಗಳಲ್ಲಿನ ರಹಸ್ಯಕಾರಿ ಸಂಗತಿಗಳನ್ನು ಸ್ವಾರಸ್ಯಮಯವಾಗಿ ಕಟ್ಟಿಕೊಡುತ್ತಾರೆ.

ಶ್ರೀಕೃಷ್ಣ ಆಲನಹಳ್ಳಿಯವರ **'ಕಾಡು'** ಕಾದಂಬರಿಯು ಮನುಷ್ಯನಲ್ಲಿರುವ ದ್ವೇಷ, ಕ್ರೌರ್ಯಗಳ ತೀಕ್ಷ್ಣತೆಯನ್ನು ಚಿತ್ರಿಸುತ್ತದೆ. ಹಿರಿಯರ ಇಂಥ ಪ್ರಪಂಚ



Scanned with CamScanner

ಮುಗ್ಧ ಮನಸ್ಸಿನ ಮೇಲೆ ಬೀರುವ ಪರಿಣಾಮವನ್ನು ಕಿಟ್ಟಿಯ ಮೂಲಕ ತೆರೆದಿಡುತ್ತದೆ. ಯಶವಂತ ಚಿತ್ತಾಲರ **'ಮೂರು ದಾರಿಗಳು'** ಗ್ರಾಮ್ಯದಲ್ಲಿನ ಜನರ ಜೀವನ ಕ್ರಮ ಮತ್ತು ಅಲ್ಲಿರುವ ಚಾಡಿಕೋರ ಪ್ರಪಂಚದಿಂದಾದ ದುರಂತವನ್ನು ಮೂರು ವಿಭಿನ್ನ ಮಾರ್ಗದರ್ಶನಲ್ಲಿ ನಿರೂಪಿಸಿದೆ.

ಲಂಕೇಶರ **'ಮುಸ್ಸಂಜೆ ಕಥಾ ಪ್ರಸಂಗ'** ಸ್ವಾರ್ಥ ಸಾಧನೆಗಾಗಿ ಹೂಡುವ ಹುನ್ನಾರಗಳನ್ನು ಮನುಷ್ಯನ ಸಣ್ಣತನಗಳನ್ನು ಚಿತ್ರಿಸುತ್ತದೆ. ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ **'ಚಿದಂಬರ ರಹಸ್ಯ'** ಹಳ್ಳಿಯಲ್ಲಿ ವೈಯಕ್ತಿಕ ಪ್ರತಿಷ್ಠೆಗಳಿಗಾಗಿ ಕೋಮುವಾದದ ಸೃಷ್ಟಿ, ಮೌಢ್ಯದ ಅವಲೋಕನವನ್ನು ಒಳಗೊಂಡರೆ ಅವರ **'ಜುಗಾರಿಕ್ರಾಸ್'** ವಾಸ್ತವ ಸಾಮಾಜಿಕ ಸಮಸ್ಯೆಗಳ ಜೊತೆಗೆ ಗ್ರಾಮ ಒಂದರ ಸರ್ವನಾಶವನ್ನು ಪ್ರಾತಿನಿಧಿಕವಾಗಿ ಕಟ್ಟಿಕೊಟ್ಟಿದೆ. ಹೀಗೆ ಒಂದೊಂದು ಕಾದಂಬರಿಯು ಒಂದು ವಿಭಿನ್ನವಾದ ಗ್ರಾಮದ ಮತ್ತು ಗ್ರಾಮಜೀವನದ ಅನಾವರಣವಾಗುತ್ತದೆ.

ಹೀಗೆ ನವ್ಯ ಕಾದಂಬರಿಗಳು ಗ್ರಾಮೀಣ ಸಮಾಜವನ್ನು ಹೊಸದಾದ ದೃಷ್ಟಿಕೋನಗಳಲ್ಲಿ ನೋಡುವ ರೀತಿಯನ್ನು ಈ ಮೂಲಕ ಗ್ರಹಿಸುವ ಪ್ರಯತ್ನ ಮಾಡಲಾಗಿದೆ.



Scanned with CamScanner